ಪಿಡಬ್ಲೂ.1: ಬಿ.ಜಿ. ಶ್ರೀನಿವಾಸ್.,

**ದಿನಾಂಕಃ 20.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಆರೋಪಿ ಸುಮಾರು 20-25 ವರ್ಷಗಳಿಂದ ಪರಿಚಯವಿರುತ್ತಾರೆ. ಆರೋಪಿ ನಿರದ್ಯೋಗಿಯಾಗಿರುತ್ತಾರೆ. ನಾನ ರಿಯಲ್ ಎಸ್ಟೇಟ್ ಹಾಗೂ Genius mens ಎಂಬ ಹೆಸರಿನಲ್ಲಿ ಟೈಲರಿಂಗ್ ಶಾಪ್ ನಡೆಸುತ್ತೇನೆ. ಸುಮೂರು 27 ವರ್ಷಗಳಿಂದ ಟೈಲರಿಂಗ್ ಶಾಪ್ ನಡೆಸುತ್ತಿದ್ದೇನೆ. ನನಗೆ ಎರಡು ವ್ಯವಹಾರಗಳಿಂದ ವರಮಾನ ಇರುತ್ತದೆ. ನಿಮ್ಮ ಆದಾಯಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸಲು ಸಾಧ್ಯವೇ ಎಂದರೆ ಸಾಧ್ಯವಿರುವುದಿಲ್ಲ ಎಂದು ನುಡಿಯುತ್ತಾರೆ. ಸುಮಾರು 6 ವರ್ಷಗಳಿಂದ ನಾನು ತೆರಿಗೆ ಪಾವತಿದಾರನಾಗಿರುತ್ತೇನೆ. ನನ್ನ ತೆರಿಗೆ ಪಾವತಿ ವರದಿಯ ಪ್ರಕಾರ 2023-2024 ನೇ ಸಾಲಿನಲ್ಲಿ ನನಗೆ ರೂ.4,75,000/- ಆದಾಯವಿತ್ತು. ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಆ ಆದಾಯದಿಂದಲೇ ನಿಮ್ಮ ಕುಟುಂಬದ ನಿರ್ವಹಣೆಯು ನಡೆಯುತ್ತದೆ ಎಂದರೆ ಸಾಕ್ಷಿಯ ನನಗೆ ರಿಯಲ್ ಎಸ್ಟೇಟ್ ಬಿಸಿನೆಸ್ನಿಂದಲೂ ಆದಾಯವಿದೆ ಎಂದು ನುಡಿಯುತ್ತಾರೆ. ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸುತ್ತೀರಾ ಎಂದರೆ ಸಾಧ್ಯವಾಗುವುದಿಲ್ಲ ಎಂದು ನುಡಿಯುತ್ತಾರೆ. ನೀವು ರಿಯಲ್ ಎಸ್ಟೇಟ್ ವ್ಯವಹಾರ ಮಾಡದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ನೀವು ತೆರಿಗೆ ಪಾವತಿ ವರದಿಯಲ್ಲಿ ನಮೂದಿಸಿರುವ ರೂ.4,75,000/- ಗಳನ್ನು ಹೊರತುಪಡಿಸಿ ಬೇರೆ ಯಾವುದೇ ಆದಾಯವಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಬಡ್ಡಿ ವ್ಯವಹಾರ ಮಾಡುವುದಿಲ್ಲ. ನೀವು ಯಾರಿಂದಲಾದರೂ ಬಡ್ಡಿ ಪಡೆದುಕೊಳ್ಳಬೇಕಾದಲ್ಲಿ ಸರ್ಕಾರದಿಂದ ಪರವಾನಗಿ ಪಡೆಯಬೇಕು ಎಂದರೆ ನಾನು ಬಡ್ಡಿ ವ್ಯವಹಾರ ಮಾಡುವುದಿಲ್ಲ

ಎಂದು ನುಡಿಯುತ್ತಾರೆ.

**2.** ಆರೋಪಿಯು 2024 ನೇ ಜನವರಿ ಮಾಹೆಯ ಮೊದಲನೆ ವಾರದಲ್ಲಿ ನನ್ನ ಬಳಿ ಹಣ ಕೇಳಿದರು. ಆರೋಪಿಗೆ 6 ಲಕ್ಷ ರೂ. ಹಣವನ್ನು ನಗದಾಗಿ ನೀಡಿದೆನು. ಆರೋಪಿಗೆ 6 ಲಕ್ಷ ಹಣ ನೀಡಿರುವ ಬಗ್ಗೆ ದೂರು ಮತ್ತು ಪ್ರಮಾಣ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ದೂರಿನಲ್ಲಿ ನೀವು ಮತ್ತು ಆರೋಪಿ 6 ಲಕ್ಷ ರೂ.ಗಳನ್ನು ಸಂಗ್ರಹಹಿಸಿದ್ದೇವೆ ಎಂದು ನಮೂದಿಸಿರುತ್ತೀರಿ ಎಂದರೆ ಸರಿಯಲ್ಲ. ನಾನು 6 ಲಕ್ಷ ರೂ.ಗಳಿಗೆ ಮನೆ ಭೋಗ್ಯಕ್ಕೆ ಹಾಕಿಕೊಂಡಿದ್ದೆನು, ಆನಂತರ ಭೋಗ್ಯವನ್ನು ರದ್ದುಪಡಿಸಿಕೊಂಡು ಅದರಿಂದ ಬಂದಂತಹ ಹಣವನ್ನು ಆರೋಪಿಗೆ ನೀಡಿದ್ದೆನು. ಮೇಲ್ಕಂಡ ವಿಷಯವನ್ನು ನಿಮ್ಮ ದೂರಿನಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. 2024 ನೇ ಇಸವಿಯಲ್ಲಿ ನಾನು ಬಾಡಿಗೆ ಮನೆಯಲ್ಲಿ ವಾಸವಾಗಿದ್ದೆನು ಎಂದರೆ ಸರಿ. ತಿಂಗಳಿಗೆ ನಾನು ರೂ.6,500/- ಮನೆ ಬಾಡಿಗೆ ನೀಡುತ್ತಿದ್ದೆನು. 6 ಲಕ್ಷ ರೂ. ಹಣವನ್ನು ನೀವು ಎಲ್ಲಿ, ಹೇಗೆ ಸಂಗ್ರಹಿಸಿದ್ದೀರಿ ಎಂದು ದೂರಿನಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ಆರೋಪಿಗೆ ಹಣ ನೀಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿದಾರರ ಸಮಕ್ಷಮ ನೀಡಿದೆನು,ಆರೋಪಿ ಅದಕ್ಕೆ ಆನ್ ಡಿಮಾಂಡ್ ಪ್ರೋನೋಟ್ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಗೆ ನಗದಾಗಿ ನೀಡಿರುವ ಬಗ್ಗೆ ನಿಮ್ಮ ದೂರಿನಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. 2024 ರ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ನಿಮ್ಮ ಹಾಗೂ ಆರೋಪಿಯ ನಡುವೆ ಯಾವುದೇ ಕರಾರು ಆಗಿರುವುದಿಲ್ಲ ಎಂದರೆ ಆನ್ ಡಿಮಾಂಡ್ ಪ್ರೋನೋಟ್ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

**3.** ಆನ್ ಡಿಮಾಂಡ್ ಪ್ರೋನೋಟ್ ನಲ್ಲಿ ಆರೋಪಿಯ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿ ಸಲ್ಲಿಸಿರುವ ಅವರ ವಕಾಲತ್ತಿನ ಸಹಿ ಹಾಗೂ ನಿ.ಪಿ.1 ರಲ್ಲಿನ ಸಹಿ ಹೆಚ್ಚು ಕಡಿಮೆ ಒಂದೇ ರೀತಿಯಾಗಿದ್ದು ಅಕ್ಷರದ ಗಾತ್ರದಲ್ಲಿ ಮಾತ್ರ ವ್ಯತ್ಯಾಸವಿದೆ. ನಿ.ಪಿ.3 ರಲ್ಲಿ ಕೈಬರಹದ ಬರವಣಿಗೆ ಇರುವುದಿಲ್ಲ ಎಂದರೆ ಆರೋಪಿ ಬೆರಳಚ್ಚು ಮಾಡಿಸಿ ತಂದಿದ್ದರು ಎಂದು ನುಡಿಯುತ್ತಾರೆ. 2024 ನೇ ಇಸವಿಯಲ್ಲಿ ನನಗೆ ಆರೋಪಿ ಚೆಕ್ಕು ನೀಡಿದ್ದರು. ನಿ.ಪಿ.1 ರಲ್ಲಿನ ಆರೋಪಿಯ ಸಹಿಯನ್ನು ಹೊರತುಪಡಿಸಿ ಇತರೆ ಬರವಣಿಗೆಗಳು ಬೇರೆ ಬೇರೆ ರೀತಿಯಾಗಿದೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಆರೋಪಿಯು ಮೊದಲೇ ಬರೆದು ಅದನ್ನು ತಂದಿದ್ದರು ಎಂದು ನುಡಿಯುತ್ತಾರೆ. ನಿ.ಪಿ.1 ರ ಚೆಕ್ಕನ್ನು 2015 ನೇ ಇಸವಿಯಲ್ಲಿ ಪಡೆದುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿ 3 ತಿಂಗಳಲ್ಲಿ ಹಣ ಮರುಪಾವತಿಸುತ್ತೇನೆ ಎಂಬ ವಿಷಯ ಆನ್ ಡಿಮಾಂಡ್ ಪ್ರನೋಟ್ ನಲ್ಲಿ ನಮಾದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.3 ರಲ್ಲಿನ ಸಾಕ್ಷಿದಾರರ ಆರೋಪಿಗೆ ಸಂಬಂಧಿಸಿರುವುದಿಲ್ಲಎಂದರೆ ಪರಿಚಯಸ್ಥರು ಎಂದು ನುಡಿಯುತ್ತಾರೆ. ನಿ.ಪಿ.3 ಕ್ಕೆ ಸೋಮಶೇಖರ್ ಮತ್ತು ಅವಿನಾಶ್ ರವರು ಸಾಕ್ಷಿದಾರರಾಗಿ ಸಹಿ ಮಾಡಿದರು. ಅವರು ನಿಮಗೆ ಸ್ನೇಹಿತರು ಎಂದರೆ ಸಾಕ್ಷಿಯು ಅವರು ನನಗೂ ಮತ್ತು ಆರೋಪಿಗೂ ಪರಿಯಸ್ತರು ಎಂದು ನುಡಿಯುತ್ತಾರೆ. ಅವರನ್ನು ಸಾಕ್ಷಿ ಮಾಡಿಸಲು ತೊಂದರೆಯೇ ಎಂದರೆ ತೊಂದರೆ ಇರುವುದಿಲ್ಲ.

**4.** ಆರೋಪಿ 3 ತಿಂಗಳ ಅವಧಿಯಲ್ಲಿ ಹಣ ನೀಡದೆ ಮುಂದಿನ ದಿನಾಂಕದ ಚೆಕ್ಕನ್ನು ನೀಡಿದ್ದರು ಎಂದು ದೂರಿನಲ್ಲಿ ನಮೂದಿಸಿದ್ದೀರಿ ಎಂದರೆ ಸರಿ. 2024 ನೇ ಏಪ್ರಿಲ್ ಮಾಹೆಯಲ್ಲಿ ಚೆಕ್ಕು ನೀಡಿದ್ದರು. ಆರೋಪಿಗೆ ನಿಮಗೆ post dated surety cheque ಅನ್ನು ನಿಮಗೆ ನೀಡಿದ್ದರು ಎಂದರೆ ಸರಿ. ಆರೋಪಿ ನಿಮಗೆ ಸಹಿ ಮಾಡಿದ ಚೆಕ್ಕನ್ನು ಮಾತ್ರ ನೀಡಿದ್ದರು ಎಂದರೆ

ಭರ್ತಿ ಮಾಡಿ ಹಾಗೂ ಸಹಿ ಮಾಡಿದ ಚೆಕ್ಕನ್ನು ನೀಡಿದ್ದರು ಎಂದು ನುಡಿಯುತ್ತಾರೆ. ಆರೋಪಿ ಪೋಸ್ಟ್ ಡೇಟಡ್ ಚೆಕ್ಕು ನೀಡಿದ ದಿನ ಬೇರೆ ಬರವಣಿಗೆಯಾಗಿದೆ ಎಂದರೆ ಆನ್ ಡಿಮಾಂಡ್ ಪ್ರೋನೋಟ್ ಬರೆದುಕೊಟ್ಟಿರುತ್ತಾರೆ. ಆರೋಪಿ ಭದ್ರತೆಗಾಗಿ ಚೆಕ್ಕು ನೀಡಿದ ನಂತರ ನಿಮಗೆ ಇಂತಹ ದಿನಾಂಕ ಚೆಕ್ಕನ್ನು ಹಾಜರುಪಡಿಸಿ ಎಂದು ಬರವಣಿಗೆಯಲ್ಲಿ ತಿಳಿಸಿದ್ದರೇ ಎಂದರೆ ಸಾಕ್ಷಿಯು ಮೌಖಿಕವಾಗಿ ತಿಳಿಸಿದ್ದರು ಎಂದು ನುಡಿಯುತ್ತಾರೆ. ಏಪ್ರಿಲ್ 2024 ನೇ ಇಸವಿಯಿಂದ ಇಲ್ಲಿಯವರೆಗೂ ನಿಮ್ಮ ಮತ್ತು ಆರೋಪಿಯ ನಡುವೆ ಯಾವುದೇ ವ್ಯವಹಾರವಾಗಿರುವುದಿಲ್ಲ ಎಂದರೆ ಸರಿ. ವಿವಾದಿತ ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿ ಎಂದು ಆರೋಪಿ ನಿಮಗೆ ತಿಳಿಸಿರಲಿಲ್ಲ ಎಂದರೆ ಸರಿಯಲ್ಲ. ಏಪ್ರಿಲ್ 2024 ರಿಂದ ಆರೋಪಿಯ ಖಾತೆಗೆ ಸಂಬಧಿಸಿದಂತೆ ಹಣಕಾಸಿನ ವ್ಯವಹಾರವಾಗಿರದ ಕಾರಣ ಅವರು ಸ್ಟಾಪ್ ಪೇಮೆಂಟ್ ಗಾಗಿ ಅರ್ಜಿ ಸಲ್ಲಿಸಿದರು ಎಂದರೆ ನನಗೆ ಗೊತ್ತಿಲ್ಲ.

**5.** ದಿ.04.10.2024 ರಂದು ಆರೋಪಿ ನಿಮಗೆ ನೋಟೀಸು ನೀಡಿದ್ದರು ಎಂದರೆ ಸರಿ. ಆ ನೋಟೀಸಿಗೆ ನೀವು ಪ್ರತ್ಯುತ್ತರ ನೀಡಿರಲಿಲ್ಲ ಎಂದರೆ ಸರಿಯಲ್ಲ. ಆ ದಾಖಲೆಯನ್ನು ಹಾಜರುಪಡಿಸಲು ಸಾಧ್ಯವೇ ಎಂದರೆ ನಮ್ಮ ವಕೀಲರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿ ತಮ್ಮ ನೋಟೀಸಿನಲ್ಲಿ ವಿವಾದಿತ ಖಾಲಿ ಸಹಿ ಮಾಡಿದ ಚೆಕ್ಕನ್ನು ಹಿಂದಿರುಗಿಸಿ ಎಂದು ಕೇಳಿಕೊಂಡಿದ್ದರೂ ಸಹ ನೀವು ಹಿಂದಿರುಗಿಸಲಿಲ್ಲ ಎಂದರೆ ಸಾಕ್ಷಿಯು ನಾನು ನೋಟೀಸಿನಲ್ಲಿ ಆ ವಿಷಯವನ್ನು ನಮೂದಿಸಿದ್ದೇನೆ ಎಂದು ನುಡಿಯುತ್ತಾರೆ. ದಿ.08.10.2024 ರಂದು ನೀವು ಆರೋಪಿಗೆ ನೋಟೀಸು ನೀಡಿರುತ್ತೀರಿ ಎಂದರೆ ಸರಿ. ಆ ನೋಟೀಸಿಗೆ ಆರೋಪಿ ಪ್ರತ್ಯುತ್ತರ ನೀಡಿರುತ್ತಾರೆ ಎಂದರೆ ಸರಿ. ಆರೋಪಿ ನೀಡಿದ ಪ್ರತ್ಯುತ್ತರ ನೋಟೀಸಿನಲ್ಲಿರುವ ವಿಷಯ ಸರಿಯಾಗಿದೆ ಎಂದರೆ ಸರಿಯಲ್ಲ.

**ಪಿಡಬ್ಲೂ.1: ಬಿ.ಜಿ. ಶ್ರೀನಿವಾಸ್.,**

**ಮುಂದುವರೆ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.